ನೋಂದಣಿ ಸಂಖ್ಯೆ : ಡಿ.ವೈ.ಆರ್.270
ದಿನಾಂಕ : 16-09-1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD KA 912 P, Dt. 11-11-1987
ಆಡಳಿತ ಕಚೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD BG BL AO 394, Dt. 22-06-2000

# TGMC BANK

ISO 9001:2015 Certified Bank

ನಿಮ್ಮ ನಂಬಿಕೆಯೇ ನಮ್ಮ ಆಸ್ತಿ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು - 572 103.
ದೂರವಾಣಿ : 0816-4021102/03 ಫ್ಯಾಕ್ಸ್ : 0816-2255905
e-mail : tgmc.ho@tgmcbank.com
website : www.tgmcbank.com

## 2018-19ನೇ ಸಾಲಿನ
## 56ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಮಂತ್ರಣ

ಆಗಸ್ಟ್ 25, 2019ನೇ ಭಾನುವಾರ

Book-Post

ಶ್ರೀಮತಿ/ಶ್ರೀ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

## ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು

1. ದೇವತಾ ಪ್ರಾರ್ಥನೆ.
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ.
3. ಸ್ವಾಗತ.
4. 56ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.
5. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
6. 2018–19ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗಳಿಗೆ ಅನುಮೋದನೆ.
7. 2018–19ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.
8. 2019–20ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸುವುದು.
9. 2018–19ನೇ ಸಾಲಿನಲ್ಲಿ ಮಂಜೂರಾದ ಆಯ–ವ್ಯಯದ ಅಂದಾಜಿಗಿಂತ ಹೆಚ್ಚುವರಿಯಾದ ಖರ್ಚುಗಳಿಗೆ ಅನುಮೋದನೆ ಕೊಡುವುದು ಹಾಗೂ 2019–20ನೇ ಸಾಲಿನ ಆಯ–ವ್ಯಯದ ಅಂದಾಜನ್ನು ಮಂಜೂರು ಮಾಡುವುದು.
10. ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12. ಉಪವಿಧಿಗಳ ತಿದ್ದುಪಡಿ.
13. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.
14. ಅಧ್ಯಕ್ಷರ ಭಾಷಣ.
15. ವಂದನಾರ್ಪಣೆ.

---

**ಸದಸ್ಯರು ಮತ್ತು ವಿಶೇಷ ಆಹ್ವಾನಿತರಿಗೆ ಮಾತ್ರ**

ಉಪಹಾರ : ಬೆಳಿಗ್ಗೆ 8.00 ರಿಂದ 10.00 ಗಂಟೆಯವರೆಗೆ

ಸ್ಥಳ : ಶ್ರೀ ಗಂಗಾಧರಯ್ಯ ಸ್ಮಾರಕ ಭವನ, ಹೆಗ್ಗೆರೆ, ಬಿ.ಹೆಚ್. ರಸ್ತೆ, ತುಮಕೂರು.

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು - 572 103.**

## 56ನೇ ವಾರ್ಷಿಕ ಸಾಮಾನ್ಯ ಸಭೆಯ

### ಆಮಂತ್ರಣ

ದಿನಾಂಕ **25-08-2019ನೇ ಭಾನುವಾರ** ಬೆಳಿಗ್ಗೆ **10.00** ಗಂಟೆಗೆ ಸರಿಯಾಗಿ ಬ್ಯಾಂಕಿನ 56ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ, ಬಿ.ಹೆಚ್. ರಸ್ತೆಯ, ಹೆಗ್ಗೆರೆಯಲ್ಲಿರುವ

**ಶ್ರೀ ಗಂಗಾಧರಯ್ಯ ಸ್ಮಾರಕ ಭವನದಲ್ಲಿ**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಎನ್.ಆರ್. ಜಗದೀಶ್**

ಇವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ಪ್ರಾರ್ಥನೆ.

**ದಿನಾಂಕ : 05-08-2019**
**ಸ್ಥಳ : ತುಮಕೂರು**

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
**ಭಾರತಿ ಎಂ.ಜಿ.**
ಮುಖ್ಯ ಕಾರ್ಯನಿರ್ವಾಹಕರು (ಪ್ರಭಾರ)

---

**ಸೂಚನೆ :**

1. ಮಾನ್ಯ ಎಲ್ಲಾ ಸದಸ್ಯರುಗಳು ಕೂಡಲೇ ತಮ್ಮ ಉಳಿತಾಯ/ಚಾಲ್ತಿ ಖಾತೆಗಳ ವಿವರಗಳನ್ನು ಬ್ಯಾಂಕಿನ ಆಡಳಿತ ಕಚೇರಿಯಲ್ಲಿ ಕಡ್ಡಾಯವಾಗಿ ಸಲ್ಲಿಸಲು ಕೋರಲಾಗಿದೆ. ಇದು ಸದಸ್ಯರ ಡಿವಿಡೆಂಡನ್ನು ಅವರವರ ಖಾತೆಗಳಿಗೆ ನೇರವಾಗಿ ಪಾವತಿಸಲು ಅತ್ಯಾವಶ್ಯಕವಾಗಿದೆ ಹಾಗೂ ವಿಳಾಸ ಬದಲಾವಣೆಯಾಗಿದ್ದಲ್ಲಿ ಕೂಡಲೇ ಸೂಕ್ತ ಪುರಾವೆಗಳೊಂದಿಗೆ ಆಡಳಿತ ಕಚೇರಿಯಲ್ಲಿ ಸಲ್ಲಿಸಲು ಕೋರಲಾಗಿದೆ.
2. ಪಡೆಯದೆ ಉಳಿದಿರುವ ಡಿವಿಡೆಂಡ್ ಹಣವನ್ನು ಕೂಡಲೇ ಪಡೆಯತಕ್ಕದ್ದು, ಇಲ್ಲವಾದಲ್ಲಿ 3 ವರ್ಷಗಳ ಮೇಲ್ಪಟ್ಟ ಡಿವಿಡೆಂಡ್ ಹಣವನ್ನು ಶಾಸನಬದ್ಧ ನಿಧಿಗೆ ವರ್ಗಾಯಿಸಲಾಗುವುದು.
3. ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ನೊಂದಾಯಿಸಲು ಕೋರಲಾಗಿದೆ.
4. ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ದೈವಾಧೀನರಾಗಿದ್ದು, ಅವರಿಗೆ ಸಂಬಂಧಪಟ್ಟವರು ಸೂಕ್ತ ದಾಖಲೆಗಳನ್ನು ಒದಗಿಸಿ ಮೃತರ ಹೆಸರಿನಲ್ಲಿರುವ ಷೇರು ಮೊಬಲಗು ಹಾಗೂ ಡಿವಿಡೆಂಡನ್ನು ಶೀಘ್ರವೇ ಪಡೆಯಲು ಕೋರಿದೆ.
5. ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ಷೇರು ಪ್ರಮಾಣ ಪತ್ರಗಳನ್ನು ಪಡೆಯದೆ ಬ್ಯಾಂಕಿನಲ್ಲಿ ಉಳಿದಿರುವುದರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಲು ಕೋರಿದೆ.

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 1 | 10 | **ಬ್ಯಾಂಕಿನ ಅಧಿಕೃತ ಷೇರು ಬಂಡವಾಳ:** ಸದಸ್ಯರ ರೂ. 100/- ರ 25 ಲಕ್ಷ ಷೇರುಗಳ ಮತ್ತು ಸಹ-ಸದಸ್ಯರ ರೂ. 100/- ರ 25 ಲಕ್ಷ ಷೇರುಗಳನ್ನು ಹೊಂದಿರತಕ್ಕ ಬ್ಯಾಂಕಿನ ಒಟ್ಟು ಷೇರು ಬಂಡವಾಳವು ರೂ. 50 ಕೋಟಿಗಳಾಗಿರತಕ್ಕದ್ದು. | **ಬ್ಯಾಂಕಿನ ಅಧಿಕೃತ ಷೇರು ಬಂಡವಾಳ:** ಸದಸ್ಯರ ರೂ. 100/- ರ 30 ಲಕ್ಷ ಷೇರುಗಳು ಮತ್ತು ಸಹ-ಸದಸ್ಯರ ರೂ. 100/- ರ 25 ಲಕ್ಷ ಷೇರುಗಳನ್ನು ಹೊಂದಿರತಕ್ಕ ಬ್ಯಾಂಕಿನ ಒಟ್ಟು ಷೇರು ಬಂಡವಾಳವು ರೂ. 55 ಕೋಟಿಗಳಾಗಿರತಕ್ಕದ್ದು. | ಬ್ಯಾಂಕಿನ ಷೇರು ಬಂಡವಾಳ ಹೆಚ್ಚಿಸುವ ಸಲುವಾಗಿ |

## ವಿಶೇಷ ಸೂಚನೆ :

1. ಬ್ಯಾಂಕಿನ ಸದಸ್ಯರು ಸತತ 5 ಸಾಮಾನ್ಯ ಸಭೆಗಳಲ್ಲಿ ಕನಿಷ್ಟ 3 ಸಾಮಾನ್ಯ ಸಭೆಗೆ ಹಾಜರಾಗದಿದ್ದರೆ ಅಂತಹ ಸದಸ್ಯರು ಮೂರು ವರ್ಷಗಳ ಅವಧಿಗೆ ಸರ್ವಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
2. ಆಡಳಿತ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ದಿನಾಂಕ 16-08-2019 ರಿಂದ ನೀಡಲಾಗುವುದು. ಪರ್ಯಾಯ ವ್ಯವಸ್ಥೆಯಾಗಿ ಇ-ಮೇಲ್ ವಿಳಾಸ ನೀಡಿದ ಸದಸ್ಯರಿಗೆ soft copy ಮುಖಾಂತರ ಕಳುಹಿಸಲಾಗುವುದು ಹಾಗೂ ವೆಬ್‌ಸೈಟ್‌ನಲ್ಲಿ ಆಡಳಿತ ವರದಿಯನ್ನು ಪ್ರಕಟಿಸಲಾಗುವುದು.
3. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸದಸ್ಯರುಗಳು ದಿನಾಂಕ 22-08-2019 ರೊಳಗೆ ಪ್ರಭಾರ ಮುಖ್ಯ ಕಾರ್ಯನಿರ್ವಾಹಕರಿಗೆ ಲಿಖಿತ ಮೂಲಕ ಸಲ್ಲಿಸಲು ಕೋರಿದೆ.
4. ಸದಸ್ಯತ್ವದ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ಕಡ್ಡಾಯವಾಗಿ ತಮ್ಮ ಭಾವಚಿತ್ರವನ್ನು ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರಿದೆ.
5. ವಾರ್ಷಿಕ ಸಾಮಾನ್ಯ ಸಭೆಗೆ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

**ಹೆಚ್.ಎಂ. ದಿವ್ಯಾನಂದಮೂರ್ತಿ**
**ಉಪಾಧ್ಯಕ್ಷರು**

**ಎನ್.ಆರ್. ಜಗದೀಶ್**
**ಅಧ್ಯಕ್ಷರು**

**ಬ್ಯಾಂಕಿನ ಖಾತೆದಾರರಿಗೆ RuPay ಡೆಬಿಟ್ ಕಾರ್ಡ್, ಅಂತರ್ಜಾಲ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಮತ್ತು IMPS ಸೌಲಭ್ಯಗಳನ್ನು ನೀಡುತ್ತಿದ್ದು ಮಾನ್ಯ ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದೆ.**